## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.788/2017

ಸಿಡಬ್ಲ್ಯೂ-3 ಪಿಡಬ್ಲ್ಯೂ- 1

| | | |
|---|---|---|
| ಹೆಸರು | : | ಶ್ರೀ ಮಹಾದೇವಪ್ಪ |
| ತಂದೆಯ ಹೆಸರು | : | ರಾಮಚಂದ್ರಪ್ಪ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತರು |
| ವಾಸ ಸ್ಥಳ | : | ಸೂಲೆಪೇಟ |

ದಿನಾಂಕ 04.01.2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2010 ರಿಂದ 2012 ರವರೆಗೆ ಸೇಡಂ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕ ಅಂತಾ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 07.05.2012 ರಂದು ನಾನು ಕಚೇರಿಯಲ್ಲಿ ಇದ್ದಾಗ ನನ್ನನ್ನು ಮತ್ತು ಶ್ರೀ ಬೋಗಪ್ಪ ಇವರನ್ನು ನಮ್ಮ ಸಾಹೇಬರು ಕರೆಯಿಸಿ ಇಟಕಲ್ ಗ್ರಾಮದ ಈರಮ್ಮ ಇವರ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಸಂಗ್ರಹಿಸಿದ್ದಾರೆಂದು ಬಾತ್ಮಿ ಬಂದಿರುವುದಾಗಿ ತಿಳಿಸಿರುತ್ತಾರೆ ಮತ್ತು ಇಬ್ಬರೂ ಪಂಚರನ್ನು ರೆಡಗಾಗಿ ಕರೆದುಕೊಂಡು ಬರಲು ಸೂಚಿಸಿರುತ್ತಾರೆ. ಆಗ ನಾನು ಮತ್ತು ಬೋಗಪ್ಪ ಇವರು ಸೇಡಂದ ಜಿ.ಕೆ. ರಸ್ತೆಯಲ್ಲಿರುವ ಒಂದು ಹೋಟಲದಲ್ಲಿ ಕುಳಿತ್ತಿದ್ದ ಚಂದಪ್ಪ ಉಡಗಿ ಮತ್ತು ಚನ್ನಬಸಪ್ಪ ಸೋಲಾಪುರ ಇವರನ್ನು ಭೇಟಿಯಾಗಿ ವಿಷಯ ತಿಳಿಸಿದಾಗ ಅವರು ರೆಡಗೆ ಒಪ್ಪಿಕೊಂಡಿರುತ್ತಾರೆ. ನಂತರ ನಾನು ನಮ್ಮ ಸಾಹೇಬರು ಮತ್ತು ಸಹದ್ಯೋಗಿಗಳು, ಪಂಚರು ಕೂಡಿಕೊಂಡು ಸರಕಾರಿ ವಾಹನದಲ್ಲಿ 04.10 ಗಂಟೆಗೆ ಹೊರಟು ಬಾತ್ಮಿ ಬಂದ ಸ್ಥಳಕ್ಕೆ 05.00 ಗಂಟೆಗೆ ತಲುಪಿರುತ್ತೇವೆ. ಆಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿದಂತೆ ಒಬ್ಬ ಮಹಿಳೆ ಸ್ಥಳದಿಂದ ಓಡಿ ಹೋಗಿದ್ದು, ಆತಳನ್ನು ಹಿಡಿಯಲು ಪ್ರಯತ್ನಿಸಿದ್ದು, ಆದರೆ ಅವಳು ಸಿಕ್ಕಿಲ್ಲ. ನಂತರ ನಮ್ಮ ಸಾಹೇಬರು ಆಕೆಯ ಮನೆಯನ್ನು ಪ್ರವೇಶ ಮಾಡಿ ಒಂದು ಮೂಲೆಯಲ್ಲಿ ಇದ್ದ 3 ಪ್ಲಾಸ್ಟಿಕ ಕೊಡಗಳನ್ನು ತೆಗೆದುಕೊಂಡಿದ್ದು ಅದರಲ್ಲಿ ಬಿಳಿಯ ಬಣ್ಣದ ಗಾಟು ವಾಸನೆವುಳ್ಳ ದ್ರವ ಇತ್ತು. ಪ್ರತಿ ಕೊಡದಲ್ಲಿ ಒಟ್ಟು 10 ಲೀ.ದಂತೆ ಒಟ್ಟು 30 ಲೀ. ಕಲಬೆರಕೆ ಸೇಂದಿ ಇತ್ತು. ಆಗ ನಮ್ಮ ಸಾಹೇಬರು ಹಾಜರಿದ್ದ ಪಂಚರ ಸಮಕ್ಷಮದಲ್ಲಿ ಒಂದು 180 ಎಮ್.ಎಲ್.ನ ಒಂದು ಬಾಟಲಿಯಲ್ಲಿ ಸದರಿ ಕಲಬೆರಕೆ ಸೇಂದಿಯನ್ನು ಹಾಕಿ ಅವುಗಳಿಗೆ ದಾರದಿಂದ ಕಟ್ಟಿ ಇಲಾಖ ಸಂಖ್ಯೆ 444 ಎಂದು ಬರೆದು ಅಧಿಕಾರಿಗಳ ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಹಚ್ಚಿದ್ದು ಇರುತ್ತದೆ. ನೆರೆದಿದ್ದ ಜನರಿಗೆ ಓಡಿ ಹೋದ ಮಹಿಳೆಯ ಹೆಸರು ಕೇಳಿದ್ದು ಆಗ ಅವರು ಆಕೆಯ ಹೆಸರು ಈರಮ್ಮ ಗಂಡ ಬಸವಂತರಾವ, ವಃ 58 ಅಂತಾ ತಿಳಿಸಿರುತ್ತಾರೆ. ಸ್ಥಳದಲ್ಲಿಯೇ 05.00 ಗಂಟೆಯಿಂದ 06.00 ಗಂಟೆಯವರಗೆ ಪಂಚನಾಮೆಯನ್ನು ಬರೆದು ಅದಕ್ಕೆ ಪಂಚರ

ಸಹಿಯನ್ನು ನಮ್ಮ ಸಾಹೇಬರು ಪಡೆದುಕೊಂಡಿರುತ್ತಾರೆ. ಆ ದಿವಸ ಓಡಿ ಹೋದ ಮಹಿಳೆಯನ್ನು ಈಗ ನೋಡಿದ್ದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಬಾಟಲಿಯನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಘಟನೆಯ ಕುರಿತು ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ. ಎಸ್. ಡಿ. ಆರೋಪಿ ಪರ ವಕೀಲರಿಂದ**

ಇಟಕಲ್ ಗ್ರಾಮದಲ್ಲಿ ಸುಮಾರು 500 ರಿಂದ 600 ಮನೆಗಳು ಇರುತ್ತವೆ ಮತ್ತು ಸುಮಾರು 6000 ಜನಸಂಖ್ಯೆ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಈರಮ್ಮಳ ಮನೆ ಯಾವುದು ಎಂದು ಸಾರ್ವಜನಿಕರಲ್ಲಿ ವಿಚಾರಣೆ ಮಾಡಿಲ್ಲ. ಆರೋಪಿಯ ಮನೆ ಎಷ್ಟು ಕೋಣೆಯದು ಎಂದು ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿಲ್ಲ. ಆರೋಪಿಯ ಯಾವ ಕೋಣೆಯ, ಯಾವ ಮೂಲೆಯಲ್ಲಿ 3 ಕೊಡಗಳು ಸಿಕ್ಕಿರುತ್ತವೆ ಎಂದು ನಾನು ಹೇಳಿಕೆಯಲ್ಲಿ ಹೇಳಿಲ್ಲ. ಚಂದಪ್ಪ ಮತ್ತು ಚನ್ನಬಸಪ್ಪ ನಮ್ಮ ಇಲಾಖೆಯ ಸಾಕಷ್ಟು ಪ್ರಕರಣಗಳಲ್ಲಿ ಪಂಚರು ಇರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಪ್ಲಾಸ್ಟಿಕ ಕೊಡಗಳನ್ನು ಜಪ್ತಿ ಮಾಡಿರುತ್ತೇವೆ. ಈಗ ಸದರಿ ಕೊಡಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಘಟನೆ ನಡೆದಾಗ ಅಲ್ಲಿ ಎಷ್ಟು ಸಾರ್ವಜನಿಕರು ಸೇರಿದ್ದರು ಎಂದು ಹೇಳಲು ಬರುವುದಿಲ್ಲ.

ದಿನಾಂಕ 07.05.2012 ರಂದು ಸಾಯಂಕಾಲ 05.00 ಗಂಟೆಗೆ ಇಟಕಲ್ ಗ್ರಾಮದ ಆರೋಪಿಯ ಮನೆಯ ಮೇಲೆ ಅಬಕಾರಿ ದಾಳಿ ಮಾಡಿರುವುದಾಗಿ ಮತ್ತು ದಾಳಿಯಲ್ಲಿ 30 ಲೀ. ಕಲಬೆರಕೆ ಸೇಂದಿ ಜಪ್ತುಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಜಪ್ತುಪಡಿಸಿಕೊಂಡ ಕಲಬೆರಕೆ ಸೇಂದಿಯಿಂದ ಒಂದು ಬಾಟಲಿಯಲ್ಲಿ 180 ಎಮ್.ಎಲ್. ಸೇಂದಿ ರಾಸಾಯನಿಕ ಪರೀಕ್ಷೆ ಸಲುವಾಗಿ ಪಂಚರ ಸಮಕ್ಷಮ ತೆಗೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾರ್ವಜನಿಕರಿಂದ ಆರೋಪಿಯ ಹೆಸರು ಕೇಳಿ ತಿಳಿದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 05.00 ಗಂಟೆಯಿಂದ 06.00 ಗಂಟೆಯವರೆಗೆ ಪಂಚನಾಮೆ ಬರೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.ಗೂ ಆರೋಪಿಗೂ ಏನು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ.ಸೇಡಂ.

*SYH*